International Journal of Kannada Research 2021; 7(3): 84-87

International Journal of Kannada Research
www.kannadajournal.com

ISSN: 2454–5813
IJKR 2021; 7(3): 84-87
© 2021 IJKR
www.kannadajournal.com
Received: 25-04-2021
Accepted: 07-06-2021

**ಶ್ರೀನಿವಾಸ**
ಸಹಾಯಕ ಪ್ರಾಧ್ಯಾಪಕರು,
ಇತಿಹಾಸ ಮತ್ತು ಪುರಾತತ್ವ
ಮತ್ತು ಸಂಶೋಧನಾ ವಿಭಾಗ,
ತುಮಕೂರು ವಿಶ್ವವಿದ್ಯಾಲಯ,
ತುಮಕೂರು, ಕರ್ನಾಟಕ, ಭಾರತ

**Corresponding Author:**
**ಶ್ರೀನಿವಾಸ**
ಸಹಾಯಕ ಪ್ರಾಧ್ಯಾಪಕರು,
ಇತಿಹಾಸ ಮತ್ತು ಪುರಾತತ್ವ
ಮತ್ತು ಸಂಶೋಧನಾ ವಿಭಾಗ,
ತುಮಕೂರು ವಿಶ್ವವಿದ್ಯಾಲಯ,
ತುಮಕೂರು, ಕರ್ನಾಟಕ, ಭಾರತ

# ಕಳಚೂರಿ ಅರಸರ ಕಾಲದ ಶಾಸನೋಕ್ತ ಆಡಳಿತ ವಿಭಾಗಗಳು: ಒಂದು ಅವಲೋಕನ

**ಶ್ರೀನಿವಾಸ**

**ಪೀಠಿಕೆ,**

ಪ್ರಾಚೀನ ಕಾಲದಿಂದಲೂ ವಿಸ್ತಾರವಾದ ಸಾಮ್ರಾಜ್ಯವನ್ನು ಆಡಳಿತದ ಅನುಕೂಲಕ್ಕೋಸ್ಕರ ನಾನ ವಿಭಾಗಗಳಾಗಿ ವಿಭಾಗ ಮಾಡಿಕೊಂಡು ಆಳ್ವಿಕೆ ನಡೆಸುತ್ತಾ ಬಂದಿರುವುದನ್ನು ಕಾಣುತ್ತೇವೆ. ಇದಕ್ಕೆ ಮುಖ್ಯ ಕಾರಣ ವಿಸ್ತಾರವಾದ ಸಾಮ್ರಾಜ್ಯವನ್ನು ಕೇವಲ ಒಬ್ಬ ವ್ಯಕ್ತಿಯಿಂದ ಆಲ್ವಿಕೆ ನಡೆಸುವುದು ಅಸಾಧ್ಯವಾದುದಾಗಿದ್ದು, ಒಂದು ಕಾರಣವಾದರೆ ಸಾಮ್ರಾಜ್ಯದ ನಾನಾ ಭಾಗಗಳಲ್ಲಿ ವಾಸವಾಗಿದ್ದ ಜನತೆಗೆ ಉತ್ತಮ ಹಾಗೂ ಅವಶ್ಯಕವಾದ ಆಡಳಿತ ನೀಡುವುದೇ ಆಗಿತ್ತು. ಇಂದಿಗೂ ನಾವುಗಳು ನಮ್ಮ ದೇಶದ ಆಡಳಿತವನ್ನು ವಿವಿಧ ರಾಜ್ಯಗಳಾಗಿ, ಕೇಂದ್ರಾಡಳಿತ ಪ್ರದೇಶಗಳಾಗಿ,ಜಿಲ್ಲೆಗಳಾಗಿ, ತಾಲ್ಲೂಕುಗಳಾಗಿ, ಹೋಬಳಿಗಳಾಗಿ ವಿಭಜನೆ ಮಾಡಿಕೊಂಡು ಕಟ್ಟಕಡೆಯ ಆಡಳಿತ ಘಟಕವಾದ ಗ್ರಾಮಮಟ್ಟದಿಂದ ಆಡಳಿತ ನಡೆಸುತ್ತಿರುವುದನ್ನು ಕಾಣಬಹುದು. ಇಂದು ಈ ವಿಭಾಗಗಳಿಗೆ ರಾಷ್ಟ್ರಮಟ್ಟದಲ್ಲಿ ರಾಷ್ಟ್ರಪತಿ, ರಾಜ್ಯಮಟ್ಟದಲ್ಲಿ ರಾಜ್ಯಪಾಲ, ತರುವಾಯ ವಿಭಾಗಗಳಿಗೆ ವಿಭಾಗಾಧಿಕಾರಿ, ಜಿಲ್ಲೆಗಳಿಗೆ ಜಿಲ್ಲಾಧಿಕಾರಿ, ಮತ್ತು ತಾಲ್ಲೂಕುಗಳಿಗೆ ತಹಶಿಲ್ದಾರುಗಳನ್ನು ನಿಯಮಿಸಲಾಗಿದೆ. ಇವರಲ್ಲಿ ರಾಷ್ಟ್ರಪತಿಯೇ ಉನ್ನತ ಅಧಿಕಾರಿಯಾಗಿರುವಂತೆ ಪ್ರತಿಯೊಬ್ಬರು ಆಳರಸರ ಕಾಲದಲ್ಲಿ ಆಯಾಯ ಸಾಮ್ರಾಜ್ಯದ ಅರಸರೇ ಪ್ರಮುಖ ಆಡಳಿತಾಧಿಕಾರಿಯಾಗಿದ್ದುದು ಗಮನಾರ್ಹ ಸಂಗತಿಯಾಗಿದೆ.

‘ಪ್ರಾಚೀನ ಕರ್ನಾಟಕದ ಆಡಳಿತ ವ್ಯವಸ್ಥೆಯನ್ನು ಸ್ಥೂಲವಾಗಿ ಎರಡು ಭಾಗಗಳಾಗಿ ವಿಂಗಡಿಸಬಹುದು. ರಾಜ್ಯಾಡಳಿತ ಮತ್ತು ಊರುಗಳ ಆಡಳಿತ. ಈ ವಿಭಜನೆಯು ಕೇವಲ ಸೌಕರ್ಯಕ್ಕಾಗಿ ಮಾಡಿಕೊಂಡಿರುವಂಥದು ಎಂಬುದನ್ನು ಮರೆಯಬಾರದು. ಏಕೆಂದರೆ ಒಂದನ್ನು ಬಿಟ್ಟು ಮತ್ತೊಂದು ಇದ್ದಿಲ್ಲ, ಒಂದರ ಸಹಕಾರದಿಂದ ಮತ್ತೊಂದು ನಡೆಯುತ್ತಿತ್ತು. ಗ್ರಾಮಗಳ ಮತ್ತು ನಗರಗಳ ಮೊತ್ತವೇ ರಾಜ್ಯ. ಎಲ್ಲಕ್ಕೂ ರಾಜನೇ ಅಧಿಪತಿ, ಎಲ್ಲವೂ ಅವನ ಆಳ್ವಿಕೆಗೆ ಒಳಪಟ್ಟವು. ಆದರೂ ಪ್ರಾಚೀನ ಕರ್ನಾಟಕದ ಗ್ರಾಮಗಳ ಆಳ್ವಿಕೆಯನ್ನು ಪರೀಶೀಲಿಸಿದರೆ ಒಂದೊಂದು ಗ್ರಾಮವೂ ಕೆಲವು ವಿಷಯಗಳಲ್ಲಿ ಆಡಳಿತದ ಪ್ರತ್ಯೇಕ ಘಟಕವೆಂಬಂತೆ ನಡೆದುಕೊಳ್ಳುತ್ತಿತ್ತು. ಒಂದೊಂದು ಗ್ರಾಮವೂ ವಿಶಾಲವಾದ ರಾಜ್ಯದೊಳಗಿನ ಒಂದು ಪುಟ್ಟ ರಾಜ್ಯ ಎನ್ನುವ ಭಾವನೆ ಬರುತ್ತದೆ’[೧] ಎಂಬ ವಿದ್ವಾಂಸರ ಅಭಿಪ್ರಾಯದಂತೆ ಆಡಳಿತ ವಿಭಾಗಗಳನ್ನು ಗುರುತಿಸಬಹುದು. ಪ್ರಾಚೀನ ಕಾಲದಲ್ಲಿ ರಾಜ್ಯದ ಆಡಳಿತವನ್ನು ರಾಜ ಹಾಗೂ ಅವನಿಂದ ನೇಮಕಗೊಂಡ ಯುವರಾಜ, ಮಹಾಪ್ರಧಾನರು ಮೊದಲ್ಗೊಂಡು ಸೇನಭೋವರವರೆಗಿನ ಅಧಿಕಾರಿಗಳು, ಊರುಗಳು ಅಂದರೆ ಸ್ಥಳೀಯ ಆಡಳಿತವನ್ನು ಗಾವುಂಡರು, ಪ್ರಜೆಗಾವುಂಡರು, ನಾಳ್ಗಾಂವುಡರು ಮೊದಲಾದ ಪರಂಪರಾಗತ ಹಾಗೂ ಅನುವಂಶೀಯ ಸ್ಥಳೀಯ ಆಡಳಿತಗಾರರು ನೋಡಿಕೊಳ್ಳುತ್ತಿದ್ದರು. ಹಾಗಾಗಿಯೇ “ಕರ್ನಾಟಕದ ಆಡಳಿತ ವಿಭಾಗಗಳ ಸೂಚನೆಗಾಗಿ ತೀರಾ ಪ್ರಾಚೀನ ಕಾಲದಲ್ಲಿ ಅಂದರೆ ಶಾತವಾಹನರ ಕಾಲದಲ್ಲಿ ಭುಕ್ತಿ, ರಟ್ಟ ಎಂಬ ಉತ್ತರ ಪದಗಳನ್ನು ಬಳಸಲಾಗಿದೆ. ಕದಂಬರ ಕಾಲದಲ್ಲಿ ವಿಷಯ, ಮಂಡಲ, ರಾಷ್ಟ್ರ ಎಂಬ ಉತ್ತರ ಪದಗಳು ಕಾಣುತ್ತವೆ. ರಾಷ್ಟ್ರಕೂಟರ ಕಾಲದಿಂದ ನಾಡು, ನಾಟ್ಟು, ಮಂಡಲ, ವಿಷಯ, ಜನಪದ, ಭೋಗ ಎಂಬ ಪದಗಳು ಬಳಕೆಗೊಂಡಿವೆ. ಈ ಆಡಳಿತ ವಿಭಾಗಗಳು ಕಲ್ಯಾಣ ಚಾಲುಕ್ಯ, ಕಲಚುರಿ, ಯಾದವ ಮತ್ತು ಹೊಯ್ಸಳರವರೆಗೆ ಮುಂದುವರಿದು, ವಿಜಯನಗರ ಅರಸರ ಕಾಲಕ್ಕೆ ಒಮ್ಮೆಲೇ ರಾಜ್ಯ, ವೇಂಠೆ, ವೇಂಠಕ, ವಳಿತ, ಚಾವಡಿ, ಮಾಗಣಿ, ಸೀಮೆ ಪದಗಳು ಕಾಣಿಸಿಕೊಳ್ಳುತ್ತವೆ. ಮರಾಠರ ಕಾಲದಲ್ಲಿ ಮಹಲು ಇತ್ಯಾದಿ ಪದಗಳು ಬಳಕೆಯಾಗಿವೆ’.[೨]

ಜೊತೆಗೆ ಮೈಸೂರು ಒಡೆಯರ ಆಳ್ವಿಕೆ ಕಾಲದಲ್ಲಿ ರಾಜ್ಯ, ಸೀಮೆ, ಸ್ಥಳ, ಹೋಬಳಿ, ಗ್ರಾಮ ಮೊದಲಾದ ಆಡಳಿತ ವಿಭಾಗಗಳನ್ನು ಮಾಡಿಕೊಂಡಿದ್ದನ್ನು ಗುರುತಿಸಬಹುದು. ಇಂತಹ ಹಲವು ಬಗೆಯ ಆಡಳಿತ ವಿಭಾಗಗಳನ್ನು ಕರ್ನಾಟಕದಲ್ಲಿ ಪ್ರಾಚೀನಕಾಲದಿಂದ ಮಧ್ಯಕಾಲೀನ ಕಾಲಘಟ್ಟದ ಅಂತ್ಯದವರೆಗೂ ಕಾಣಬಹುದು. ಹಾಗಾಗಿ ಕರ್ನಾಟಕದ ಪ್ರಮುಖ ರಾಜ ಸಂತತಿಯಾದ ಕಲ್ಯಾಣದ ಕಳಚೂರಿಗಳ ಕಾಲದ ಕೆಲವು ಶಾಸನೋಕ್ತ ಆಡಳಿತ ವಿಭಾಗಗಳ ಅವಲೋಕನವನ್ನು ಈ ಲೇಖನವು ಹೊಂದಿದೆ.

**ಆಡಳಿತ ವಿಭಾಗಗಳು :**

ಪ್ರಾಚೀನ ಕಾಲದಲ್ಲಿ ಆಡಳಿತದ ಅನುಕೂಲಕ್ಕಾಗಿ ಪ್ರತಿಯೊಂದು ರಾಜಮನೆತನದ ಆಳ್ವಿಕೆಯ ಅವಧಿಯಲ್ಲಿ ಒಂದೊಂದು ಬಗೆಯ ಆಡಳಿತ ವಿಭಾಗಗಳು ಅಸ್ತಿತ್ವದಲ್ಲಿದ್ದವು. ಕ್ರಿ.ಶ.೨೫ ರಿಂದ ಕ್ರಿ.ಶ.೧೯೪೮ರವರೆಗೆ ಕರ್ನಾಟಕವನ್ನು ಆಳ್ವಿಕೆ ಮಾಡಿದ ಕಳಚೂರಿ ಅರಸರ ಕಾಲದಲ್ಲಿದ್ದ ಮುಖ್ಯವಾದ ಕೆಲವು ಆಡಳಿತ ವಿಭಾಗಗಳನ್ನು ಕೆಳಕಂಡಂತೆ ಚರ್ಚಿಸಲಾಗಿದೆ.

**೧) ನಾಡು**

ನಾಡು ಎಂಬುದನ್ನು ಕಂಪಣಗಳಿಗೆ ವಿರುದ್ದವಾಗಿ ಅಂದರೆ ದೊಡ್ಡ ಆಡಳಿತ ವಿಭಾಗ ಎಂಬುದಾಗಿ ಅರ್ಥೈಸುತ್ತಾ ಬರಲಾಗಿದೆ. ಆದರೆ ಬಹುತೇಕ ಸಂದರ್ಭದಲ್ಲಿ ಸಣ್ಣ ಆಡಳಿತ ವಿಭಾಗ ಮತ್ತು ದೊಡ್ಡ ಆಡಳಿತ ವಿಭಾಗಗಳಿಗೂ 'ನಾಡು' ಎಂಬ ಪದವನ್ನು ಬಳಕೆ ಮಾಡಿರುವುದನ್ನು ಶಾಸನಗಳಲ್ಲಿ ಕಾಣಬಹುದು. "ಕುಂತಳದೇಶದೊಳ್ಮನಂಗೊಳಿಪ ಮುಖಕ್ಕೆ ಬನಾಸಿಕಮೆನಿಪ್ಪವೊಲಿರ್ಪ್ಪ ನೊಳಂಬವಾಡಿ ನಾಡೊಳಗಿದು ದ್ರಿಷ್ಟಿ ತಾನೆನಿಪ ಕೋಗಳಿ ನಾಳ್ಕಾತಿರಮ್ಯ ಮಾಗಿದೆ" ಎಂಬಲ್ಲಿ ನೊಳಂಬಬಾಡಿ-೩೨೦೦೦ವನ್ನು, ಅದರ ಉಪವಿಭಾಗವಾದ ಕೋಗಳಿ-೫೦೦ನ್ನು 'ನಾಡು' ಎಂದು ಕರೆಯಲಾಗಿದೆ. ಜೊತೆಗೆ ಕೋಗಳಿ-೫೦೦ರ ಉಪವಿಭಾಗವಾದ ಬೆಣ್ಣೆಯೂರು-೧೨ನ್ನು 'ನಾಡು' ಎಂದು ಕರೆಯಲಾಗಿರುವುದನ್ನು ಕಾಣಬಹುದು. ಇದಲ್ಲದೆ ನಾಡು, ನಾಟು ಪದಗಳ ಪ್ರಾಚೀನತೆಯ ಬಗ್ಗೆ ಹೇಳುವಾಗ ಇತಿಹಾಸಕಾರರು ತಮಿಳಿನ ಶಂಗಂ ಸಾಹಿತ್ಯದ ಕಡೆಗೆ ಮುಖ ಮಾಡಿದ್ದಾರೆ. ಆದರೆ ಮೊದಲಿಗೆ ನಾಡು ಪದವನ್ನು ಬಳಸಿದವರು 'ಎರುಮಿನಾಟವರು' ಎಂದು ಗುರುತಿಸಲಾಗಿದೆ. ಎರುಮಿನಾಟರು ತಮಿಳಗಂನ ಉತ್ತರಕ್ಕಿದ್ದ ಕನ್ನಡಿಗರಾಗಿದ್ದಾರೆ. ಇವರನ್ನು 'ಕರುನಾಡ ಎರುಮೈ'ಗಳೆಂದು ಶಂಗಂ ಕವಿಗಳು ಕರೆದಿದ್ದಾರೆ. ಈ ಕುಡುನಾಡನ್ನು 'ಕೊಡಗುನಾಡು' ಎಂದು ವಿದ್ವಾಂಸರು ಗುರುತಿಸಿದ್ದಾರೆ[೩]. ಕನ್ನಡದ ಪ್ರಾಚೀನ ಶಾಸನವೆಂದು ಪರಿಗಣಿಸಲಾಗಿರುವ ಕ್ರಿ.ಶ.೪೫೦ರ ಹಲ್ಮಿಡಿ ಶಾಸನದಲ್ಲಿ 'ನರಿದಾವಿ(ಟೆ)ನಾಡು' ಎಂಬ ಉಲ್ಲೇಖವಿದೆ [೪]. ಒಟ್ಟಾರೆ 'ನಾಡು' ಎಂಬ ಪದ ದೊಡ್ಡ ಸಣ್ಣ, ಅತಿ ಸಣ್ಣ ವಿಭಾಗಗಳಿಗೂ ಬಳಸಿರುವುದರಿಂಮದ ಅದು ಸ್ಥೂಲವಾಗಿ 'ಪ್ರದೇಶ' ಎಂಬ ಅರ್ಥವನ್ನು ನಿರ್ದೇಶಿಸಲು ಮಾತ್ರ ಬಳಕೆಯಾಗಿದೆ. ಹಾಗಾಗಿ 'ನಾಡು' ಎಂದರೆ ದೊಡ್ಡ ವಿಭಾಗವಲ್ಲ ಎನ್ನುವುದು ಸ್ಪಷ್ಟವಾಗುತ್ತದೆ [೫]. ಕಳಚೂರಿಯರ ಕಾಲದ ನಾಡುಗಳಿಗೆ ಉದಾಹರಣೆಯಾಗಿ ತರ್ದವಾಡಿ ನಾಡು [೬], ಬನವಾಸಿ ನಾಡು [೭], ತರಕನಾಡು ಹಾಗೂ ಕರಹಾಡ ನಾಡು [೮], ಬೆಳವಲ ನಾಡು [೯], ಮೆನದಡಿನಾಡು [೧೦], ಎಂಬುವುಗಳನ್ನು ನೀಡಬಹುದು.

**೨) ಕಂಪಣ**

'ಕಂಪಣ' ಎಂಬುದು 'ನಾಡು' ಎಂಬ ವಿಭಾಗಕ್ಕಿಂತ ಚಿಕ್ಕದಾಗಿದ್ದರೂ ಸ್ವತಂತ್ರವಾದ ವಿಭಾಗವಲ್ಲ. ಒಂದು ಭಾಗದ ಉಪವಿಭಾಗವನ್ನು ಇದು ಧ್ವನಿಸುತ್ತದೆ. ಉದಾಹರಣೆಗೆ 'ಎಡದೊರೆ-೨೦೦೦ದ ಕಂಪಣಮಂ ಕರಡಿಕಲ್ಲೂನೂರಂ [೧೧]' ಎಂಬುದನ್ನು ಹೆಸರಿಸಬಹುದು. ಅಂದರೆ ಸಾವಿರಕ್ಕಿಂತ ಕಡಿಮೆ ಗ್ರಾಮಗಳನ್ನು ಒಳಗೊಂಡ ಸಣ್ಣ ವಿಭಾಗಗಳನ್ನು ನಿರ್ದೇಶಿಸುವಲ್ಲಿ ಮಾತ್ರ ಕಂಪಣ ಪದವನ್ನು ಬಳಸಲಾಗುತ್ತಿತ್ತೆಂಬುದು ಕಂಡು ಬರುತ್ತದೆ. ಕ್ರಿ.ಶ.೧೧೭೧ರ ನದಿಹರಳಳ್ಳಿ ಶಾಸನವು ಬನವಾಸೆನಾಡಿನ ಯಡವಟ್ಟ ಕಂಪಣ, ಬಳ್ಳ ಕಂಪಣ, ನರಿಯಳಿಗೆ ನೂರು ಕಂಪಣಗಳ ಬಗ್ಗೆ ಹೇಳಿದ್ದರೆ [೧೨], ಕ್ರಿ.ಶ.೧೧೭೮ರ ಕಟಗೇರಿ ಶಾಸನವು ಕುಂತಳ ದೇಶದ ಕರಹಾಡ-೪೦೦೦ದೊಳಗಿನ ಕನ್ನಂಬಂಡೆ ಕಂಪಣ ಹಂಗರಗಿ-೧೨ ಕರವೀಡು ೩೦ರ ಬಗ್ಗೆ ಬೆಳಕು ಚೆಲ್ಲುತ್ತದೆ [೧೩]. ಒಟ್ಟನಲ್ಲಿ ಮಂಡಲ,ನಾಡು, ಕಂಪಣಗಳ ಸ್ವರೂಪ ಮೂಲತಃ ಅನಿರ್ದಿಷ್ಟವಾಗಿದ್ದು, ನಾಡು, ಮಂಡಲ, ದೇಶ ದೊಡ್ಡವು; ಕಂಪಣ ಚಿಕ್ಕದು ಎಂದು ಸ್ಥೂಲವಾಗಿ ಹೇಳಬಹುದು.

**೩) ಕರಹಾಡ-೪೦೦೦**

ಕರಹಾಡ-೪೦೦೦ವು ಕಳಚೂರಿಗಳ ಕಾಲದ ಪ್ರಮುಖ ಆಡಳಿತ ವಿಭಾಗಗಳಲ್ಲಿ ಒಂದಾಗಿದ್ದು, ಇಂದಿನ ಸತಾರ ಜಿಲ್ಲೆಯ ಕರಹಾಡ ನಗರವೇ ಇದರ ರಾಜಧಾನಿಯಾಗಿತ್ತು. ಸತಾರ, ಸಾಂಗ್ಲಿ, ಜಿಲ್ಲೆಗಳು ಹಾಗೂ ಕರ್ನಾಟಕದ ಬೆಳಗಾವಿ, ಬಿಜಾಪೂರ ಜಿಲ್ಲೆಯ ಕೆಲವು ಪ್ರದೇಶಗಳು ಇದರ ವ್ಯಾಪ್ತಿಗೆ ಬರುತ್ತಿದ್ದವು. ಕ್ರಿ.ಶ.೧೧೭೪ರ ಕಳಚೂರಿಯರ ಉಮ್ರಾಣಿ ಶಾಸನವು ಕರಹಾಡ-೪೦೦೦ ವು ಕುಂತಳ ದೇಶದಲ್ಲಿ ಶೋಭಿಸುತ್ತಿತ್ತು. ಕಳ್ಳಂಬಂಡೆ ನಾಡು ಬಾಡದ ಅದರ ರಾಜಧಾನಿಯಾಗಿ ಉಮ್ರಾಣಿ ಇತ್ತು ಎಂದು ಕರಹಾಡ-೪೦೦೦ದರ ವಿವರಣೆಯನ್ನು ಕೊಡುತ್ತದೆ [೧೪].

**೪) ಅಲಂದೆ ಸಾಸಿರ**

ಈಗಿನ ಗುಲಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನ ಕೇಂದ್ರ ಸ್ಥಳವೇ ಹಿಂದೆ ಅಲಂದೆ ಸಾಸಿರ ವಿಭಾಗದ ರಾಜಧಾನಿಯಾಗಿತ್ತು, ಈ ವಿಭಾಗವು ಗುಲಬರ್ಗಾ ಜಿಲ್ಲೆಯ ಅಫಜಲಪುರ ತಾಲ್ಲೂಕು, ಆಳಂದ ತಾಲ್ಲೂಕು ಹಾಗೂ ಚಿತ್ತಾಪೂರ ತಾಲ್ಲೂಕಿನ ಹಲವು ಗ್ರಾಮಗಳನ್ನು, ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕನ್ನು ಮತ್ತು ಮಹಾರಾಷ್ಟ್ರದ ಉಸ್ಮಾನಾಬಾದ್ ಜಿಲ್ಲೆಯ ಕೆಲವು ಪ್ರದೇಶಗಳನ್ನು, ಸೊಲ್ಲಾಪೂರ ಜಿಲ್ಲೆಯ ಕೆಲವು ಗ್ರಾಮಗಳನ್ನು ಒಳಗೊಂಡು ಒಟ್ಟು
೧೦೦೦ ಗ್ರಾಮಗಳ ವಿಭಾಗವಾಗಿದ್ದಿತ್ತು. ಅಣಂದೂರು-೩೦೦, ಮೊರಂಬ-೯೪, ಅತ್ತಿನೂರು ೮೦ ಮತ್ತು ಕಂಪಣವತ್ತಿ, ಗಾನಾಪೂರಗಳು ಮಾತ್ರ ಈ ಅಲಂದೆಸಾಸಿರದ ಉಪವಿಭಾಗಗಳಾಗಿದ್ದವೆಂದು ತಿಳಿದುಬಂದಿದೆ. ಅಲಂದೆ ಸಾಸಿರವೂ ಸಹ ಕಳಚೂರಿಯರ ಆಡಳಿತ ವಿಭಾಗಗಳಲ್ಲಿ ಒಂದಾಗಿದ್ದು, ೧೨ನೇ ಶತಮಾನದ ಗಬ್ಬೂರು ಶಾಸನವು ಅಲಂದೆಸಾಸಿರ ನಾಡಿನ ಬಗ್ಗೆ ತಿಳಿಸುತ್ತದೆ [೧೫].

**೫)ಅಣಂದೂರು – ೩೦೦**

ಅಣಂದೂರು-೩೦೦ ಅಲಂದೆ ಸಾಸಿರ ಆಡಳಿತ ವಿಭಾಗದ ಉಪವಿಭಾಗವಾಗಿದ್ದು, ಇಂದಿನ ಉಸ್ಮಾನ್‌ಬಾದ್ ಜಿಲ್ಲೆಯ ತುಳಜಾಪೂರ ತಾಲ್ಲೂಕಿನ ಅಣಂದೂರು ಗ್ರಾಮವೇ ಹಿಂದೆ ಮುನ್ನೂರು ಗ್ರಾಮಗಳ ಉಪವಿಭಾಗಕ್ಕೆ ರಾಜಧಾನಿ ಪಟ್ಟಣವೆನಿಸಿತ್ತು. ಇದು ಉಸ್ಮಾನಬಾದ್ ತುಳಜಾಪೂರ ತಾಲ್ಲೂಕು, ಸೊಲ್ಲಾಪೂರ ಜಿಲ್ಲೆಯ ದಕ್ಷಿಣ ಸೊಲ್ಲಾಪೂರ ತಾಲ್ಲೂಕು ಹಾಗೂ ಕರ್ನಾಟಕದ ಗುಲಬರ್ಗಾ ಜಿಲ್ಲೆಯ ಅಫ್ಜಲಪೂರ ತಾಲ್ಲೂಕು

ಪ್ರದೇಶಗಳನ್ನೊಳಗೊಂಡಿತ್ತು. ಇದರ ಉಪವಿಭಾಗಗಳೆಂದರೆ, ಕುಂಬರಿಗಾವೆ-೬೦, ಮುಂದುರ್ವ-೩೦, ಅಂಕುಲಿಗೆ-೫೦, ಮನಿಯೂರು-೧೨. ಅರವತ್ತಾರು ಬಾಡಂಗಳಾಗಿವೆ. ಈ ಆಡಳಿತ ವಿಭಾಗವು ಕಳಚೂರಿಯರ ಕಾಲದ ಆಡಳಿತಕ್ಕೆ ಸಂಬಂಧಿಸಿತ್ತೆಂದು, ಭಂಡಾರಗವಟೆ, ಮಾಂದ್ರೂಪ, ತೀರ್ಥ, ಜಾರಾದ್, ವಂಗಿ, ಕುಂಬಾರಿ, ಶಿವಾನಿ ಶಾಸನಗಳು ಅಣಂದೂರು-೩೦೦ ನ್ನು ಉಲ್ಲೇಖಿಸುತ್ತವೆ [೧೬].

**೬) ಗೊಂಕನಾಡು -೧೨೦**

ಇಂದಿನ ಗುಲಬರ್ಗಾ ಜಿಲ್ಲೆಯ ಆಳಂದ ತಾಲೂಕಿನ ಹಾಗೂ ಗುಲಬರ್ಗಾ ತಾಲೂಕಿನ ಗ್ರಾಮಗಳಾದ ಕಾಳಗಿ, ಝುಳಕಿ, ಹಿಪ್ಪರಗಿ, ಕುಡಕಿ, ನೀಲೂರು, ಆಲೂರು, ನಿಂಬರ್ಗ, ಸಾಲಿಯಸೀಮಳು, ನೆಳಕುಂದೆ, ಮೆಣಲಿ, ಕೊಳನೂರು, ಬೆಳಗುಪ್ಪ, ಮಾಡ ವಡಿ, ಮುಂತಾದ ಗ್ರಾಮಗಳನ್ನು ಈ ವಿಭಾಗ ಒಳಗೊಂಡಿತ್ತು. ಕ್ರಿ.ಶ.೧೧೮೦ ರ ಕೂಡಲ ಶಾಸನವು ಗೊಂಕನೂರ-೧೨೦ರ ಆಡಳಿತ ವಿಭಾಗದ ಬಗ್ಗೆ ವಿವರಿಸುತ್ತದೆ [೧೭].

**೭) ತರ್ದವಾಡಿಸಾಸಿರ**

ಕಳಚೂರಿಗಳ ಕಾಲದಲ್ಲಿ ಜನಪ್ರಿಯವಾಗಿದ್ದ ಪ್ರಾಂತವೆಂದರೆ 'ತರ್ದವಾಡಿ ಸಾಸಿರ'. ಇದನ್ನು ಶಾಸನಗಳು "ತರ್ದವಾಡಿ ನಾಡು" ಅಥವಾ "ತರ್ದವಾಡಿ ಸಾಸಿರ" ಎಂದೇ ಕರೆದಿವೆ. ಇಂದಿನ ಬಿಜಾಪೂರ ಜಿಲ್ಲೆಯ ಇಂಡಿ ತಾಲೂಕಿನ "ತದ್ದೇವಾಡಿ" ಗ್ರಾಮವೇ ಈ ವಿಭಾಗದ ರಾಜಧಾನಿಯಾಗಿತ್ತು. ಆದರೆ ಕ್ರಿ.ಶ. ೧೦೨೪ ರ ಎರಡನೇ ಸೋಮೇಶ್ವರನ ಆಳ್ವಿಕೆಯಲ್ಲಿ ಇದರ ರಾಜಧಾನಿ ತದ್ದೇವಾಡಿಯಿಂದ ಅಥವಾ ತರ್ದವಾಡಿಯಿಂದ ವಿಜಯಪುರ ಇಂದಿನ ಬಿಜಾಪುರಕ್ಕೆ ಸ್ಥಳಾಂತರಿಸಲ್ಪಟ್ಟಿತೆಂದು ಹೇಳಬೇಕಾಗುತ್ತದೆ [೧೮]. ತರ್ದವಾಡಿ ಸಾಸಿರದ ವಿಭಾಗವು ಈಗಿನ ಬಿಜಾಪುರ ಜಿಲ್ಲೆಯ ಉತ್ತರಭಾಗದ ಬಹಳಷ್ಟು ಗ್ರಾಮಗಳನ್ನು ಸೊಲ್ಲಾಪೂರ ಜಿಲ್ಲೆಯ ದಕ್ಷಿಣಭಾಗದ ಕೆಲವು ಗ್ರಾಮಗಳನ್ನೂ ಗುಲಬರ್ಗಾ ಜಿಲ್ಲೆಯ ಕೆಲವು ಗ್ರಾಮಗಳನ್ನು ಈ ಪ್ರಾಂತ್ಯ ಒಳಗೊಂಡಿತ್ತು. ತರ್ದವಾಡಿ ಸಾಸಿರದ ಉಪವಿಭಾಗಗಳೆಂದರೆ ಆರುನೂರುಂಬಾಡ, ಬಾಗೆ-೫೦, ಮುತ್ತಗೆ-೩೦, ಪೆರ್ಬಾಳ-೧೨, ವಾಯುವಡ-೧೨, ಯಳಮೇಲ-೩೦, ಕುಮ್ಮಸಿ-೩೦, ಖೇಡ-೩೬ ಬಾಡಂ, ಸಿಂಧಗಿ-೧೨, ಸೋಗಿಲು-೧೨, ರುವಿಗೆ-೩೬, ಈ ಆಡಳಿತ ವಿಭಾಗಗಳ ಬಗ್ಗೆ ಮುತ್ತಗೆಯ-೭೦ ಶಾಸನಗಳು ತರ್ದವಾಡಿ ಸಾಸಿರ ಆಡಳಿತ ವಿಭಾಗಗಳ ಬಗ್ಗೆ ಪರಿಚಯಿಸುತ್ತದೆ [೧೯].

**೮) ಬನವಾಸಿ - ೧೨೦೦೦**

ಬನವಾಸಿ-೧೨೦೦೦ ಪ್ರಾಚೀನ ಕಾಲದಿಂದಲೂ ಜನಮನ ಸೂರೆಗೊಂಡ ಪ್ರೇಕ್ಷಣಿಯ ಸ್ಥಳವಾಗಿದೆ. ಈ ನಾಡನ್ನು ಮಹಾಕವಿ ಪಂಪನು ತನ್ನ ವಿಕ್ರಮಾರ್ಜುನ ವಿಜಯಂ ಮಹಾಕಾವ್ಯದಲ್ಲಿ "ಅರಂಕುಸ ವಿಟ್ಟೊಡಂ ನೆನೆವುದೆನ್ನ ಮನಂ ವನವಾಸಿ ದೇಶಮಂ" ಎಂದು ಹೊಗಳಿದ್ದಾನೆ. ಬನವಾಸಿ-೧೨೦೦೦ದರಲ್ಲಿ ಈಗ ಉಪಲಬ್ಧವಿರುವ ಇದರ ಉಪವಿಭಾಗಗಳೆಂದರೆ, ನೂರುಂಬಾಡ, ಇಟ್ಟಿಗೆ-೩೦, ರಟ್ಟೇಪಳ್ಳಿ-೭೦, ಸತ್ತಳಿಗೆ-೭೦, ಹೊನ್ನತ್ತಿ-೧೨, ನಾಗರಖಂಡ-೭೦, ಗಜಗಂಡ-೬೦೦, ಕಾಲಡಿ-೯೬, ಎಡವಟ್ಟ-೭೦, ಬಸವುರ-೧೪೦, ಜಿಡ್ಡುಳಿಗೆ-೭೦ ಮತ್ತು ಕರ್ಬುನಾಲಗೆ-೭೦. ಕಳಚೂರಿಯರ ಕಾಲದ ಹಂಸಭಾವಿ, ಎಮ್ಮಿಗನೂರು, ತಿಳವಳ್ಳಿ, ದೇವಗೇರಿ, ಬಳ್ಳಿಗಾವೆ, ಹುಲಹಳ್ಳಿ, ಶಾಸನಗಳು ಬನವಾಸಿ-೧೨೦೦೦ದ ಆಡಳಿತ ವಿಭಾಗಗಳ ಬಗ್ಗೆ ವಿವರಗಳನ್ನು ನೀಡುತ್ತವೆ [೨೦].

**೯) ನೊಳಂಬವಾಡಿ-೩೨೦೦೦**

'ನೊಳಂಬವಾಡಿ' ಎಂಬ ಶಬ್ದಕ್ಕೆ ತಮಿಳಿನಲ್ಲಿ ದೊಡ್ಡ ಭಾಗಎಂಬ ಅರ್ಥವಿದೆ. ಈ ಪ್ರದೇಶವನ್ನು ಆಳುತ್ತಿದ್ದ ಪಲ್ಲವರಿಗೆ ಗಂಗರ, ರಾಷ್ಟ್ರಕೂಟರ, ಚಾಲುಕ್ಯರ ಕಾಲದಲ್ಲಿ 'ನೊಣಂಬರು' ಅಥವಾ ನೊಳಂಬರು ಎಂದು ಕರೆಯಲಾಗಿದೆ ಆರಂಭದಲ್ಲಿ ಈ ನೊಳಂಬವಾಡಿಯ ರಾಜಧಾನಿ 'ಪೆಂಜೆರ' ಅಥವಾ ಹೆಂಜೇರು ಆಗಿತ್ತು ಈಗಿನ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಹೇಮಾವತಿ ಗ್ರಾಮವೇ ಪುರಾತನ 'ಹೆಂಜೇರು' ಒಂದು ಕಾಲದಲ್ಲಿ ಬಳ್ಳಾರಿ ಜಿಲ್ಲೆಯ 'ಕಂಪಲಿ' (ಈಗಿನ ಕಂಪ್ಲಿ)ಯೂ ಇದರ ರಾಜಧಾನಿಯಾಗಿತ್ತು. ರಾಷ್ಟ್ರಕೂಟರ ಕಾಲದಲ್ಲಿ ಚಿಕ್ಕವಿಭಾಗವಾಗಿದ್ದ ಇದು ಮುಂದೆ ೩೨೦೦ ಗ್ರಾಮಗಳನ್ನು ಹೊಂದಿ ದೊಡ್ಡ ವಿಭಾಗವಾಗಿ ಪರಿಣಮಿಸಿತು.

ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಪಾಂಡ್ಯರು ಮಹಾಮಂಡಳೇಶ್ವರರಾಗಿ ನೊಳಂಬವಾಡಿ-೩೨೦೦೦ ವನ್ನು ಆಳುತ್ತಿದ್ದರು. ಇದರ ಕಾಲದಲ್ಲಿ ಇವರ ರಾಜಧಾನಿಯೂ ಬಳ್ಳಾರಿ ಜಿಲ್ಲೆಯ ಹರಸನಹಳ್ಳಿ ತಾಲ್ಲೂಕಿನ ಉಚ್ಚಂಗಿ ದುರ್ಗವಾಗಿತ್ತು. ನೊಳಂಬಿವಾಡಿ- ೩೨೦೦೦ ದ ವಿಭಾಗವು ಈಗಿನ ಚಿತ್ರದುರ್ಗ, ಶಿವಮೊಗ್ಗ, ಬಳ್ಳಾರಿ, ತುಮಕೂರು ಜಿಲ್ಲೆಯ ಕೆಲವು ಗ್ರಾಮಗಳನ್ನು ಒಳಗೊಂಡಿತ್ತು ಇದರ ಉಪವಿಭಾಗಗಳೆಂದರೆ ಅತ್ತಿಗೇರಿ-೧೨, ಕೋಗಳಿ-೫೦೦, ಕದಂಬಳಿಗೆ-೧೦೦೦, ಹಡುವಗೆರೆ-೫೦೦, ಕುಕ್ಕವಾಡಿ-೩೦೦, ಸಿಂದವಾಡಿ-೧೦೦೦, ಕಣಿಯಕಲ್ಲು-೩೦೦, ಮತ್ತು ರೊದ್ದ-೩೦೦ ಆಗಿದೆ. ಇತರೆ ವಿಭಾಗಗಳ ಉಲ್ಲೇಖ ಅನುಪಲಬ್ದವಾಗಿದೆ. ಈ ಭಾಗವು ಕಳಚೂರಿಗಳ ಕಾಲದಲ್ಲಿಯೂ ಸಹ ಆಡಳಿತ ವಿಭಾಗವಾಗಿತ್ತೆಂದು ಮಾನ್ಯರ ಮಸಲವಾಡ ಕ್ರಿ.ಶ.೧೧೮೩ರ ಶಾಸನವು ನೊಳಂಬವಾಡಿ- ೩೨೦೦೦ವನ್ನು ಉಲ್ಲೇಖಿಸುತ್ತವೆ [೨೧].

ಒಟ್ಟಾರೆ, ಕ್ರಿ.ಶ. ೯೨೫ ರಿಂದ ಕ್ರಿ.ಶ.೧೧೯೪ರವರೆಗೆ ಕಲ್ಯಾಣದ ಚಾಲುಕ್ಯರ ನಂತರ ಕರ್ನಾಕವನ್ನು ಆಳ್ವಿಕೆ ಮಾಡಿದ ಕಲಚೂರಿಗಳ ಕಾಲದಲ್ಲಿ ಆಡಳಿತ ಸಮರ್ಪಕವಾಗಿ ಸಾಗಲು ಮೇಲ್ಕಂಡ ಆಡಳಿತವಿಭಾಗಗಳು ಕಾರಣವಾಗಿದ್ದವು ಎಂಬುದರಲ್ಲಿ ಸಂಶಯವಿಲ್ಲ.

**ಕೊನೆ ಟಿಪ್ಪಣಿಗಳು**

1. ಚಿದಾನಂದಮೂರ್ತಿ.ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ.356
2. ಎಂ.ಎಂ. ಕಲುಬುರ್ಗಿ(ಸಂ), ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು, ಪುಟ.ತು-ತ್ತು
3. ಶೆಟ್ಟರ್.ಷ., ಶಂಗಂ ತಮಿಳಗಂ ಮತ್ತು ಕನ್ನಡ ನಾಡು ನುಡಿ, ಪುಟ.146.
4. ಗೋಪಾಲ.ಬಿ.ಆರ್., ಎಪಿಗ್ರಾಫಿಯಾ ಕರ್ನಾಟಿಕಾ, ಸಂಪುಟ.9,ಬೇಲೂರು, ಶಾಸನ ಸಂಖ್ಯೆ.236,ಹಲ್ಮಿಡಿ,ಪುಟ.222.
5. ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್ಸ್, ಸಂಪುಟ.9, ಭಾಗ-1, ಶಾಸನ ಸಂಖ್ಯೆ.99, ಕ್ರಿ.ಶ.1044
6. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ,10, ಕಡಲೆವಾಡ, ಶಾಸನ ಸಂಖ್ಯೆ.37, ಕ್ರಿ.ಶ.1158
7. ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್ಸ್, ಸಂಪುಟ.18, ಹುಲಹಳ್ಳಿ, ಶಾಸನ ಸಂಖ್ಯೆ.191,ಕ್ರಿ.ಶ.1182
8. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ,6, ಉಮ್ರಾಣಿ, ಸಾಸನ ಸಂಖ್ಯೆ.111, ಕ್ರಿ.ಶ.1172
9. ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್ಸ್, ಸಂಪುಟ.15, ಅಣ್ಣೀಗೇರಿ,

ಶಾಸನ ಸಂಖ್ಯೆ.102, ಕ್ರಿ.ಶ.1162
10. ಗೋಗಿ ಹನುಮಾಕ್ಷಿ, ಕಲ್ಬುರ್ಗಿ ಜಿಲ್ಲೆಯ ಶಾಸನಗಳು, ಕಾಳಗಿ,ಶಾಸನ ಸಂಖ್ಯೆ.13, ಕ್ರಿ.ಶ.1173
11. ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್ಸ್, ಸಂಪುಟ.9, ಭಾಗ–1, ಶಾಸನ ಸಂಖ್ಯೆ.101
12. ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್ಸ್, ಸಂಪುಟ.18, ನದಿಹರಳಳ್ಳಿ, ಶಾಸನ ಸಂಖ್ಯೆ.144,ಕ್ರಿ.ಶ.1166
13. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ,8, ಕಟಗೇರಿ, ಶಾಸನ ಸಂಖ್ಯೆ.29, ಕ್ರಿ.ಶ.1178
14. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ,6,ಉಮ್ರಾಣಿ, ಶಾಸನ ಸಂಖ್ಯೆ.111, ಕ್ರಿ.ಶ.1174,
15. ಗೋಗಿ ಹನುಮಾಕ್ಷಿ, ಕಲ್ಬುರ್ಗಿ ಜಿಲ್ಲೆಯ ಶಾಸನಗಳು, ಗಬ್ಬೂರು, ಶಾಸನ ಸಂಖ್ಯೆ.3, ಕ್ರಿ.ಶ 13ನೇ ಶತಮಾನ
16. ಶಿದ್ಧಲಿಂಗಯ್ಯ ವೀರಭದ್ರಯ್ಯ ಹಿರೇಮಠ., 2013, ಕರ್ನಾಟಕದ ಕಳಚೂರಿಗಳ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನ ಮಹಾಪ್ರಬಂಧ, ಪುಟ.104–105
17. ಗೋಗಿ ಹನುಮಾಕ್ಷಿ, ಕಲ್ಬುರ್ಗಿ ಜಿಲ್ಲೆಯ ಶಾಸನಗಳು, ಕೂಡಲ, ಶಾಸನ ಸಂಖ್ಯೆ.26, ಕ್ರಿ.ಶ.1180
18. ನಾಗಯ್ಯ.ಜೆ.ಎಂ., ಆರನೆಯ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ, ಪುಟ.98.
19. ಶಿದ್ಧಲಿಂಗಯ್ಯ ವೀರಭದ್ರಯ್ಯ ಹಿರೇಮಠ., 2013, ಕರ್ನಾಟಕದ ಕಳಚೂರಿಗಳ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ.ಪದವಿಗಾಗಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನ ಮಹಾಪ್ರಬಂಧ, ಪುಟ.99
20. ಅದೇ, ಪುಟ.104–105
21. ಅದೇ, ಪುಟ.107